**1 ನೇ ಹೆಚ್ಚುವರಿ ಹಿರಿಯ ಸಿವಿಲ್ ಮತ್ತು ಜೆ ಎಂ ಎಫ್ ಸಿ ನ್ಯಾಯಾಲಯ,**

**ಚಿತ್ರದುರ್ಗ**

**ಸಿ.ಸಿ. 2350/2021**

| | | |
|---|---|---|
| ಸಾಕ್ಷಿದಾರರ ಹೆಸರು | ರಂಜಿತ್ ರಾಮನ್ | PW:3 |
| ತಂದೆಯ ಹೆಸರು | ಎಂ. ರಾಮನ್ | CW:4 |
| ವಯಸ್ಸು | 50 ವರ್ಷ | ಪ್ರಮಾಣ ವಚನ ಬೋದಿಸಿದ ದಿನಾಂಕ : 06/05/2024 |
| ಉದ್ಯೋಗ | ಜೋನಲ್ ಮ್ಯಾನೇಜರ್, ಐ.ಸಿ.ಐ.ಸಿ.ಐ. ಬ್ಯಾಂಕ್ ಬೊಮ್ಮನಹಳ್ಳಿ, ಬೆಂಗಳೂರು | |
| ವಾಸ | ಬೆಂಗಳೂರು | |

**ಮುಖ್ಯ ವಿಚಾರಣೆಃ ಮಾನ್ಯ ಎ ಪಿ ಪಿ ರವರಿಂದಃ**

1. ಕೃತ್ಯ ನಡೆದಾಗ ನಾನು ಚಿತ್ರದುರ್ಗದ ಐ.ಸಿ.ಐ.ಸಿ.ಐ ಬ್ಯಾಂಕ್‌ನಲ್ಲಿ ಏರಿಯಾ ಮ್ಯಾನೇಜರ್ ಆಗಿ ಕೆಲಸ ಮಾಡುತ್ತಿದ್ದೆ. ನಾನು ದಿ.28/02/2012 ಮತ್ತು 01/03/2012 ರಂದು ರಂದು ಮಾಲು ಅಮಾನತ್ ಪಂಚನಾಮೆಗಳಿಗೆ ಸಹಿ ಮಾಡಿರುತ್ತೇನೆ. ಸಾಕ್ಷಿಯು ತನ್ನ ಸಹಿಗಳನ್ನು ನೋಡಿ ಗುರುತಿಸಿದ್ದರಿಂದ ಅವುಗಳನ್ನು ನಿಪಿ.3 ಮತ್ತು 4 ಎಂದು, ಸಾಕ್ಷಿಯ ಸಹಿಗಳನ್ನು ನಿಪಿ.3(ಎ) ಮತ್ತು ನಿಪಿ.4(ಎ) ಎಂದು ಗುರುತಿಸಲಾಯಿತು. ನಿಪಿ.3 ಮತ್ತು 4 ಅಮಾನತ್ ಪಂಚನಾಮೆಗಳ ಪ್ರಕಾರ ದಾಖಲೆಯನ್ನು ಮಾನಸ್ ರಂಜನ್ ದಾಸ್ ರವರು ಪೊಲೀಸರಿಗೆ ಕೊಟ್ಟಿರುತ್ತಾರೆ, ಆಗ ನಾನು ಮತ್ತು ರಾಮಲಿಂಗಪ್ಪ ಹಾಜರು ಇದ್ದೆವು. ನಿಪಿ.3 ನ್ನು ಬೆಳಗ್ಗೆ 11 ಗಂಟೆಗೆ ಮಾಡಿರುತ್ತಾರೆ ಮತ್ತು ನಿಪಿ.4 ನ್ನು ಸಂಜೆ 5 ಗಂಟೆಗೆ ಮಾಡಿರುತ್ತಾರೆ. ಅಮಾನತ್ತು ಮಾಡಿದ ದಾಖಲೆಗಳನ್ನು ನೋಡಿದರೆ ಗುರುತಿಸುತ್ತೇನೆ.

2. 25 ಗೋಲ್ಡ್ ಲೋನ್ ರಿಜಿಸ್ಟರ್, ಇನ್ವೆಂಟರಿ ಕಂ ಅಪ್ರೈಸರ್ ಸರ್ಟಿಫಿಕೇಟ್, ಗೋಲ್ಡ್ ಲೋನ್‌ಗೆ ಸಂಬಂಧಪಟ್ಟಂತೆ 65 ಮೂಲ ವೋಚರ್‌ಗಳು, 17 ಮೂಲ ಕ್ಯಾಶ್ ಡೆಪಾಸಿಟ್ ರಸೀದಿಗಳು, 21 ಮೂಲ ಜಿವೆಲ್ ಲೋನ್ ಅಕೌಂಟ್ಸ್ ಅಪ್ಲಿಕೇಷನ್ ಫಾರಂಗಳು ದಾಖಲೆಗಳನ್ನು ಪೊಲೀಸರು ಅಮಾನತ್‌ಪಡಿಸಿಕೊಂಡಿರುತ್ತಾರೆ. ಗೋಲ್ಡ್ ಲೋನ್ ರಿಜಿಸ್ಟರ್‌ನ್ನು ನಿಪಿ.5 ಎಂದು ಗುರುತಿಸಲಾಯಿತು. ನಿಪಿ.5 ರ ಪುಟ ಸಂಖ್ಯೆ 49, 52, 53, 55, 56, 57, 58, 61, 62, 63, 65, 73 ಈ ಕೇಸಿಗೆ ಸಂಬಂಧಪಟ್ಟದ್ದಾಗಿರುತ್ತವೆ. ಸದರಿ ಪುಟಗಳನ್ನು ನಿಪಿ.5(ಎ) ರಿಂದ 5(ಎಲ್) ಎಂದು ಗುರುತಿಸಲಾಯಿತು. ಮೂರು ಇನ್ವೆಂಟರಿ ಕಂ ಅಪ್ರೈಸರ್ ಸರ್ಟಿಫಿಕೇಟ್‌ಗಳನ್ನು ನಿಪಿ.6 ರಿಂದ 8 ಎಂದು ಗುರುತಿಸಲಾಯಿತು. 65 ಮೂಲ ವೋಚರ್‌ಗಳನ್ನು ನೋಡಿ ಗುರುತಿಸಿದ್ದು, ಅವುಗಳನ್ನು ನಿಪಿ.9 ರಿಂದ 73 ಎಂದು ಗುರುತಿಸಲಾಯಿತು. ಸಾಕ್ಷಿಯು 17 ಮೂಲ ಕ್ಯಾಶ್ ಡೆಪಾಸಿಟ್ ರಸೀದಿಗಳನ್ನು ನೋಡಿ ಗುರುತಿಸಿದ್ದು, ಅವುಗಳನ್ನು ನಿಪಿ.74 ರಿಂದ 90 ಎಂದು ಗುರುತಿಸಲಾಯಿತು. ಸಾಕ್ಷಿಯು 21 ಮೂಲ ಜಿವೆಲ್ ಲೋನ್ ಅಕೌಂಟ್ಸ್ ಅಪ್ಲಿಕೇಷನ್ ಫಾರಂಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ನಿಪಿ. 91 ರಿಂದ 111 ಎಂದು ಗುರುತಿಸಲಾಯಿತು.

**ಪಾಟೀ ಸವಾಲು 3 ಮತ್ತು 7 ನೇ ಆರೋಪಿತರ ಪರ ಶ್ರೀ ಎಂ.ಬಿ. ವಕೀಲರಿಂದಃ**

3. ನಾನು 3 ನೇ ತರಗತಿವರೆಗೆ ಕನ್ನಡವನ್ನು ಬೆಂಗಳೂರಿನಲ್ಲಿ ವಿದ್ಯಾಬ್ಯಾಸ ಮಾಡಿರುತ್ತೇನೆ. ಕನ್ನಡ ಓದಲು ಮತ್ತು ಬರೆಯಲು ಬರುತ್ತಾ ಎಂದರೆ ಇಲ್ಲ. ದಾವಣಗೆರೆ ಮತ್ತು ತುಮಕೂರಿನಲ್ಲಿ 2012 ರಲ್ಲಿ ಐ.ಸಿ.ಐ.ಸಿ.ಐ. ಬ್ಯಾಂಕ್ ಬ್ರಾಂಚ್ ಇತ್ತೋ ಇಲ್ಲವೋ ಎಂದರೆ ಇತ್ತು. ದಿ.28/02/2012 ರಂದು ನಾನು ಬೆಂಗಳೂರಿನ ಐ.ಸಿ.ಐ.ಸಿ.ಐ. ಬ್ಯಾಂಕಿನಲ್ಲಿ ಕೆಲಸ ಮಾಡುತ್ತಿದ್ದೆ. ಪೊಲೀಸರು ಮಹಜರ್ ಮಾಡುವಾಗ ನನಗೆ ಬರಬೇಕು ಎಂದು ನೋಟೀಸು ಕೊಟ್ಟಿದ್ದಾರಾ ಎಂದರೆ ನೆನಪಿಲ್ಲ, ನಂತರ ಹೌದು ಎಂದು ಹೇಳುತ್ತಾರೆ. ಬೆಂಗಳೂರಿನಿಂದ ಚಿತ್ರದುರ್ಗಕ್ಕೆ 3 ಗಂಟೆ ಪ್ರವಾಸ. ಇಂತಹ ದಿನ ಇಷ್ಟು ಗಂಟೆಗೆ ಪೊಲೀಸ್ ಠಾಣೆಗೆ ಇರಬೇಕು ಎಂದು ಯಾರು ಹೇಳಿರುತ್ತಾರೆ ಎಂದರೆ ಚಿತ್ರದುರ್ಗ ಪೊಲೀಸರು ನನಗೆ ಚಿತ್ರದುರ್ಗದಲ್ಲಿ ಈ ಬಗ್ಗೆ ನೋಟೀಸು ಕೊಟ್ಟಿರುತ್ತಾರೆ. ಹಾಗಾದರೆ ಬೆಂಗಳೂರಿನಲ್ಲಿ ನಾನು ಇದ್ದಾಗ ಪೊಲೀಸರು

ಚಿತ್ರದುರ್ಗಕ್ಕೆ ಕರೆಯಿಸಿ ನೋಟೀಸು ಕೊಟ್ಟಿದ್ದಾರಾ ಎಂದರೆ ಇಲ್ಲ, ಸಾಕ್ಷಿಯು ನಾನು ಕೆಲ ದಿನಗಳು ಕಾಲ ಚಿತ್ರದುರ್ಗದಲ್ಲಿ ವಾಸ ಇದ್ದೆ, ಆಗ ಪೊಲೀಸರು ನನಗೆ ನೋಟೀಸು ಕೊಟ್ಟಿದ್ದರು. ಚಿತ್ರದುರ್ಗಕ್ಕೆ ಏಕೆ ಬಂದಿದ್ದಿರಿ ಎಂದರೆ ಸಾಕ್ಷಿ ಜುಯೆಲ್ ಲೋನ್ ಫ್ರಾಡ್ ಆದ ಬಗ್ಗೆ ವಿಚಾರಣೆಗಾಗಿ ನಾನು ಚಿತ್ರದುರ್ಗ ಬ್ರಾಂಚ್‌ಗೆ ಬಂದಿದ್ದೆ. ಚಿತ್ರದುರ್ಗ ಬ್ರಾಂಚ್‌ಗೆ ಯಾರು ಕರೆಯಿಸಿದ್ದರು ಎಂದರೆ ಸಾಕ್ಷಿ ಬುಸಿನೆಸ್ ಟೀಂ ನನ್ನನ್ನು ಕರೆಯಿಸಿದ್ದರು. ಸದರಿ ಬುಸಿನೆಸ್ ಟೀಂನ ಲೀಡರ್ ಹೆಸರು ನನಗೆ ಈಗ ನೆನಪಿಲ್ಲ. ಯಾವ ದಿನ ಮತ್ತು ಯಾವ ಸಮಯಕ್ಕೆ ಕರೆಯಿಸಿದ್ದರು ಎಂದರೆ ಸಾಕ್ಷಿ ಫೆಬ್ರವರಿ 7 ಇರಬಹುದು, ನಿಖರವಾಗಿ ನೆನಪಿಲ್ಲ, ಆದರೆ ಸಂಜೆ ಸಮಯದಲ್ಲಿ ಫೋನ್ ಮಾಡಿದ್ದರು ಎಂದು ಹೇಳುತ್ತಾರೆ. ಬುಸಿನೆಸ್ ಟೀಂ ಲೀಡರ್ ಚಿತ್ರದುರ್ಗಕ್ಕೆ ಬರಬೇಕು ಎಂದು ನೋಟೀಸು ಕೊಟ್ಟಿದ್ದಾರಾ ಎಂದರೆ ಇಲ್ಲ, ಆದರೆ ಫೋನ್‌ನಲ್ಲಿ ತಿಳಿಸಿರುತ್ತಾರೆ. ಚಿತ್ರದುರ್ಗದ ಪೊಲೀಸ್ ಠಾಣೆಗೆ ಯಾವಾಗ ಬಂದಿರುತ್ತೀರಾ ಎಂದರೆ ನಾನು ಚಿತ್ರದುರ್ಗದ ಪೊಲೀಸ್ ಠಾಣೆಗೆ ತುಂಬ ಸಲ ಬಂದಿರುತ್ತೇನೆ, ನಿಖರವಾಗಿ ದಿನಾಂಕ ಮತ್ತು ಸಮಯ ಹೇಳಲು ಆಗುವುದಿಲ್ಲ. ಬ್ಯಾಂಕಿನವರು ದೂರು ದಾಖಲಿಸಿದ ನಂತರ ಫೆಬ್ರವರಿ 18 ರಿಂದ ಫೆಬ್ರವರಿ 22 ರವರೆಗೆ ನಾನು ಚಿತ್ರದುರ್ಗ ಪೊಲೀಸ್ ಠಾಣೆಗೆ ಬಹಳಷ್ಟು ಭಾರಿ ಹೋಗಿರುತ್ತೇನೆ. ಎಷ್ಟು ಭಾರಿ ಹೋಗಿರುತ್ತೇನೆ ಎಂದು ನಿಖರವಾಗಿ ಹೇಳಲು ಆಗುವುದಿಲ್ಲ.

4. ನಾನು ಚಿತ್ರದುರ್ಗ ಬ್ಯಾಂಕ್‌ಗೆ ಗೋಲ್ಡ್ ಲೋನ್ ವಂಚನೆ ಆದ ಬಗ್ಗೆ ಗೊತ್ತಾದ ನಂತರ ಬರುವ ಮೊದಲು ದೂರುದಾರರು ಬಂದಿದ್ದರೋ ಅಥವಾ ಇಲ್ಲವೋ ಎಂದರೆ ನಾನು ಬೆಂಗಳೂರಿನಿಂದ ಮೊದಲು ಬಂದೆ, ನಾನು ಬಂದ ನಂತರ ದೂರುದಾರರು ಹುಬ್ಬಳಿಯಿಂದ ಚಿತ್ರದುರ್ಗಕ್ಕೆ ಬಂದಿರುತ್ತಾರೆ. ನಾನು ಮೊದಲು ಚಿತ್ರದುರ್ಗಕ್ಕೆ ಬಂದಿದ್ದರಿಂದ ಮೊದಲು ದೂರು ಪೊಲೀಸ್ ಠಾಣೆಗೆ ಕೊಟ್ಟಿದ್ದೀರಾ ಎಂದರೆ ಇಲ್ಲ, ಸಾಕ್ಷಿ ಸ್ವತಃ ಹೇಳುವುದೇನೆಂದರೆ ನಾನು ಮತ್ತು ದೂರುದಾರರು ಇಬ್ಬರು ವಿಚಾರಣೆ ಮಾಡಿ ದೂರುದಾರರು ದೂರನ್ನು ಠಾಣೆಗೆ ನೀಡಿರುತ್ತಾರೆ. ನಾನು ಮತ್ತು ದೂರುದಾರರು ಬಿಟ್ಟು ಇನ್ಯಾರು ವಿಚಾರಣೆ ಮಾಡಿದ್ದಾರೆ ಎಂದರೆ ನಮ್ಮ ಮ್ಯಾನೇಜರ್ ಆದ ಮಾನಸ್ ರಂಜನ್ ದಾಸ್ ಮತ್ತು ಪ್ರೇಮ್‌ಜಿತ್ ಕೆಂಟೋ, ಸತೀಶ್.ಪಿ, ಮತ್ತು ಐ.ಸಿ.ಐ.ಸಿ.ಐ. ರಿಸ್ಕ್ ಟೀಂ ವಿಚಾರಣೆ ಮಾಡಿದ್ದಾರೆ.

5. ನಿಪಿ.3 ರಲ್ಲಿ ಕಾಣಿಸಿದ ದಾಖಲೆಗಳನ್ನು ಸೀಲ್ ಮಾಡಿದ್ದಾರಾ ಎಂದರೆ ನೆನಪಿಲ್ಲ. ಮಹಜರ್ ಯಾರು ಬರೆದಿರುತ್ತಾರೆ ಎಂದರೆ ಪೊಲೀಸರು ಬರೆದಿರುತ್ತಾರೆ. ಆ ಪೊಲೀಸ್ ಯಾರು ಎಂದರೆ ರೈಟರ್ ಎಂದು ಹೇಳುತ್ತಾರೆ. ನಿಪಿ.3 ಬರೆದ ಪೊಲೀಸರು ಸಹಿ ಮಾಡಿದ್ದಾರಾ ಎಂದರೆ ಹೌದು. ಮಹಜರ್‌ನಲ್ಲಿ ಬರೆದಿರುವ ವಿಚಾರ ಗೊತ್ತಾ ಎಂದರೆ ಹೌದು. ಸದರಿ ಮಹಜರ್‌ನಲ್ಲಿ ನಮೂದಿಸಿರುವ ಅಕೌಂಟ್ ನಂಬರ್ ಹೇಳಲು ಆಗುತ್ತಾ ಎಂದರೆ ಈಗ ನೆನಪಿಲ್ಲ. 17 ವೋಚರ್ ನಲ್ಲಿ ಯಾರು ಯಾರು ಸಹಿ ಮಾಡಿದ್ದಾರೆ ಹೇಳಲು ಆಗುತ್ತಾ ಎಂದರೆ ಹೌದು. ಯಾರು ಯಾರು ಎಂದರೆ 17 ವೋಚರ್ ನೋಡಬೇಕು, ನಾನು ನೋಡದೆ ಹೇಳಲು ಆಗುವುದಿಲ್ಲ ಎಂದು ಹೇಳುತ್ತಾರೆ. 17 ವೋಚರ್‌ನಲ್ಲಿ ಯಾರ ಹೆಸರು ಇದೆ ಹೇಳಲು ಆಗುತ್ತಾ ಎಂದರೆ ಅದರಲ್ಲಿ ಹೆಸರು ಬರೆದಿಲ್ಲ.

6. ದಿ.28/02/2012 ರ ನಂತರ ದಿ.01/03/2012 ರಂದು ಪುನಃ ಬರಬೇಕು ಎಂದು ನೋಟೀಸು ಕೊಟ್ಟಿದ್ದರಾ ಎಂದರೆ ಹೌದು. ದಿ.01/03/2012 ರಂದು ನಾನು ಚಿತ್ರದುರ್ಗದಿಂದ ಪೊಲೀಸ್ ಠಾಣೆಗೆ ಹೋಗಿರುತ್ತೇನೆ, ಕಾರಣ ದಿ.01/03/2012 ರಂದು ನಾನು ಚಿತ್ರದುರ್ಗದಲ್ಲಿ ಇದ್ದೆ. ಎಲ್ಲಾ ಅಕೌಂಟ್ ನಂಬರ್ ಹೇಳಲು ಆಗುವುದಿಲ್ಲ, ದಾಖಲೆ ತೋರಿಸಿದರೆ ನೋಡಿ ಹೇಳಬಲ್ಲೆ. 27 ಗೋಲ್ಡ್ ಲೋನ್ ಅಕೌಂಟ್ಸ್ ಫಾರಂ ತೋರಿಸಿದರೆ ಯಾರ ಯಾರ ಹೆಸರಿನಲ್ಲಿ ಇದೆ ಎಂದು ಹೇಳಬಲ್ಲೆ. ಇದರ ಬಗ್ಗೆ ನಿಪಿ.4 ಮಹಜರ್‌ನಲ್ಲಿ ಬರೆದಿದ್ದಾರಾ ಎಂದರೆ ಇಲ್ಲ. ಐ.ಸಿ.ಐ.ಸಿ.ಐ. ಬ್ಯಾಂಕ್ ಕಾಂಪ್ಲೆಕ್ಸ್‌ನಲ್ಲಿ ಈ ಬ್ಯಾಂಕ್‌ನ್ನ ಬಿಟ್ಟು ಬೇರೆ ಅಂಗಡಿಗಳು, ಹೋಟೆಲ್ ಮತ್ತು ಲಾಡ್ಜ್ ಇದೆ ಎಂದರೆ ಹೌದು. ನಿಪಿ.3 ಮತ್ತು 4 ಮಾಡುವ ಮೊದಲು ಪೊಲೀಸರು ನನಗೆ ನೋಟೀಸು ನೀಡಿ ನನ್ನ ಸಮಕ್ಷಮ ದಾಖಲೆ ಅಮಾನತ್ ಪಡಿಸಿಕೊಂಡಿರುತ್ತಾರೆ ಎಂದು ಹೇಳುವ ವಿಚಾರ ಸುಳ್ಳು ಎಂದರೆ ಸರಿಯಲ್ಲ.

7. ದಿ.28/02/2012 ಮತ್ತು ದಿ.01/03/2012 ರಂದು ಬೆಂಗಳೂರಿನಲ್ಲಿ ಕೆಲಸ ಮಾಡುತ್ತಿದ್ದ ಕಛೇರಿಗೆ ರಜೆ ಹಾಕಿ ಬಂದಿದ್ದರೋ ಅಥವಾ ಹಾಗೆಯೇ ಬಂದಿದ್ದೀರಾ ಎಂದರೆ ರಜಾ ಹಾಕಿಲ್ಲ, ಸಾಕ್ಷಿ ಸ್ವತಃ ಹೇಳುವುದೇನೆಂದರೆ ಬೆಂಗಳೂರು ಮತ್ತು ಚಿತ್ರದುರ್ಗ ಎರಡೂ ಬ್ಯಾಂಕ್ ಒಂದೇ ಆದರೆ ಸ್ಥಳ ಬೇರೆ ಇರುವುದರಿಂದ ರಜೆ ಹಾಕಿಲ್ಲ. ಕರ್ನಾಟಕದಲ್ಲಿ

**PW:2**

ಐ.ಸಿ.ಐ.ಸಿ.ಐ. ಬ್ಯಾಂಕ್ ಸಾಕಷ್ಟು ಇರುತ್ತವೆ ಎಂದರೆ ಹೌದು. ಬೆಂಗಳೂರಿನ ಮುಖ್ಯ ಮ್ಯಾನೇಜರ್ ಮಾನಸ್ ರಂಜನ್ ಡ್ಯಾಶ್ ಇರುತ್ತಾರೆ. ಸದರಿ ಮ್ಯಾನೇಜರ್ ರವರು ನನಗೆ ಚಿತ್ರದುರ್ಗಕ್ಕೆ ಹೋಗಿಬನ್ನಿ ಎಂದು ಲಿಖಿತ ರೂಪದಲ್ಲಿ ಲೆಟರ್ ಕೊಟ್ಟಿದ್ದಾರಾ ಎಂದರೆ ಇಲ್ಲ. ನಿಪಿ.3 ಮತ್ತು 4 ದಾಖಲೆಗಳಿಗೆ ಪೊಲೀಸರು ಬೆಂಗಳೂರಿಗೆ ಬಂದು ನನ್ನ ಸಹಿ ಪಡೆದಿರುತ್ತಾರೆ ಎಂದರೆ ಸರಿಯಲ್ಲ.

**ಪಾಟೀ ಸವಾಲು 2 ಮತ್ತು 4 ನೇ ಆರೋಪಿತರ ಪರ ಶ್ರೀ ಡಿ.ಎಂ.ಬಿ. ವಕೀಲರಿಂದಃ**

ಶ್ರೀಮತಿ ಎಂ.ಬಿ. ವಕೀಲರು ಮಾಡಿದ ಪಾಟೀ ಸವಾಲನ್ನು ತಮ್ಮ ಪಾಟೀ ಸವಾಲನ್ನಾಗಿ ಅಳವಡಿಸಿಕೊಳ್ಳಲು ಕೇಳಿಕೊಂಡಿರುತ್ತಾರೆ.

**ಪಾಟೀ ಸವಾಲು 1 ಮತ್ತು 5 ನೇ ಆರೋಪಿ ಪರ ವಕೀಲರಿಂದಃ**

ಪಾಟೀ ಸವಾಲಿಗೆ ಸಮಯ ಕೋರಿರುತ್ತಾರೆ, ಆದರೆ ಈ ಕೇಸಿನಲ್ಲಿ ಕ್ರಿಮಿನಲ್ ಪೆಟಿಷನ್ ನಂ.6490/2022 ರ ನಿರ್ದೇಶನದಂತೆ ಮೂರು ತಿಂಗಳಲ್ಲಿ ಕೇಸನ್ನು ವಿಲೇವಾರಿ ಮಾಡಬೇಕು ಎಂದು ಆದೇಶ ಇರುತ್ತದೆ, ಆದ್ದರಿಂದ ವಕೀಲರ ಕೋರಿಕೆಯನ್ನು ತಿರಸ್ಕರಿಸಿ, ಪಾಟೀ ಸವಾಲು ಇಲ್ಲ ಎಂದು ಪರಿಗಣಿಸಲಾಯಿತು.

**ಮರುವಿಚಾರಣೆಃ ಇಲ್ಲ**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ತಕ್ಕಂತೆ ಬೆರಳಚ್ಚುಮಾಡಲಾಯಿತು)**

**ಓ ಹೇ ಕೇ ಸರಿ ಇದೆ**

**1 ನೇ ಹೆಚ್ಚುವರಿ ಹಿರಿಯ ಸಿವಿಲ್ ಮತ್ತು**
**ಜೆ ಎಂ ಎಫ್ ಸಿ ನ್ಯಾಯಾಧೀಶರು, ಚಿತ್ರದುರ್ಗ**